ಮೈಸೂರಿನ ರಂಗಭೂಮಿ ಚಟುವಟಿಕೆಗಳಲ್ಲಿ ಪ್ರಸಿದ್ಧ ಪ್ರಹಸನಕಾರ ಟಿ.ಪಿ. ಕೈಲಾಸಂ ಸಕ್ರಿಯರಾಗಿದ್ದರು. 'ರತ್ನಾವಳಿ' ಸ್ಥಾಪನೆಯಲ್ಲೂ ಅವರು ಕೈಜೋಡಿಸಿದ್ದರು. ಕೈಲಾಸಂ ತಮ್ಮದೇ ಆದ ನಾಟಕ ಸಂಘವನ್ನು ಕಟ್ಟಿ ಹೊಸ ಬಗೆಯ ನಾಟಕಗಳನ್ನು ರಚಿಸಿ ಪ್ರದರ್ಶಿಸುತ್ತಿದ್ದರು. ರಾಘವೇಂದ್ರರಾಯರು ಕೈಲಾಸಂ ಅವರ 'ಕುಲವೈಭವ', 'ಹೋಂರೂಲ್', 'ಶೂರ್ಪನಖಾ' ಮುಂತಾದ ನಾಟಕಗಳಿಗೆ ಬಣ್ಣ ಹಚ್ಚಿದರು.

ಕೈಲಾಸಂ ಅವರು ವೃತ್ತಿ ರಂಗಭೂಮಿಗಿಂತ ವಿಭಿನ್ನ ರೀತಿಯಲ್ಲಿ ನಾಟಕಗಳನ್ನು ರಚಿಸುತ್ತಿದ್ದರು. ಅವರ ನಾಟಕ ಸಂಘ ಕೇವಲ ಹವ್ಯಾಸಕ್ಕಾಗಿ ನಾಟಕಗಳನ್ನು ಪ್ರದರ್ಶಿಸುತ್ತಿತ್ತು. ರಾಘವೇಂದ್ರ ರಾವ್ ವೃತ್ತಿ ನಾಟಕರಂಗದಲ್ಲಿ ಪರಿಣತಿ ಪಡೆದಿದ್ದರು. ಜೊತೆಗೆ ಅವರು ಸಂಸಾರ ಸಾಗಿಸಬೇಕಿತ್ತು. ಹೀಗಾಗಿ ರಾಯರು ಆಗಿನ ಪ್ರಮುಖ ಕಂಪನಿಗಳಲ್ಲಿ ಒಂದಾಗಿದ್ದ 'ಗುಬ್ಬಿ' ಕಂಪನಿಗೆ ಕಾಲಿಟ್ಟರು. ಕನ್ನಡ ವೃತ್ತಿ ರಂಗಭೂಮಿಯ ಅಗ್ರ ನಟರೆಲ್ಲ ಗುಬ್ಬಿ ಕಂಪನಿಯಲ್ಲಿ ಅಭಿನಯಿಸುತ್ತಿದ್ದ ಕಾಲ ಅದು. ಹಿರಿಯ ನಟರಿಗೆ ಪ್ರಮುಖ ಪಾತ್ರಗಳು ಮೀಸಲಾಗಿದ್ದವು. ಸಣ್ಣ ಪುಟ್ಟ ಪಾತ್ರಗಳು ರಾಯರ ಪಾಲಿಗೆ ಬಂದಿದ್ದವು.

ಒಂದು ಕಾಲಘಟ್ಟದಲ್ಲಿ ಕಲಾವಿದ ಸುಬ್ಬಯ್ಯನಾಯ್ಡು ಗುಬ್ಬಿ ಕಂಪನಿಯನ್ನು ತೊರೆದರು. ಆಗ ಅವರು ನಿರ್ವಹಿಸುತ್ತಿದ್ದ ಬಹುತೇಕ ಎಲ್ಲಾ ಪಾತ್ರಗಳ ನಿರ್ವಹಣೆಯನ್ನು ರಾಘವೇಂದ್ರ ಅವರಿಗೆ ಕೊಡಲಾಯಿತು. ಕಂಪನಿ ಮಾಲೀಕ ಜಿ.ಎಚ್. ವೀರಣ್ಣನವರೂ 'ಸದಾರಮೆ', 'ರಾಜಭಕ್ತಿ ಗುಲೇಬಕಾವಲಿ', 'ಪ್ರಭಾಮಣಿ ವಿಜಯ', 'ಕರ್ನಾಟಕ ಸಾಮ್ರಾಜ್ಯ' ಮೊದಲಾದ ನಾಟಕಗಳಲ್ಲಿ ಅಭಿನಯಿಸಿದ ರಾಯರಿಗೆ ಬಹು ದೊಡ್ಡ ಹೆಸರು ತಂದುಕೊಟ್ಟ ಪಾತ್ರ ಕುರುಕ್ಷೇತ್ರದ ದುರ್ಯೋಧನನ ಪಾತ್ರ. ಗುಬ್ಬಿ ಕಂಪನಿಯ ಯಶಸ್ವಿ ನಾಟಕಗಳಲ್ಲಿ 'ಕುರುಕ್ಷೇತ್ರ'ಕ್ಕೆ ಪ್ರತ್ಯೇಕ ಸ್ಥಾನವಿದೆ. ಆರಂಭದಲ್ಲಿ ಕರ್ಣ, ಅರ್ಜುನರ ಪಾತ್ರ ರಾಯರ ಪಾಲಿಗೆ ಬಂದಿತ್ತು. ಯಾವುದೇ ಪಾತ್ರವಾಗಲಿ ಅದನ್ನು ಅರ್ಥ ಮಾಡಿಕೊಂಡು ಅಭಿನಯಿಸುವ ಕಲೆ ಅವರಿಗೆ ಕರಗತವಾಗಿತ್ತು. ದುರ್ಯೋಧನನ ಪಾತ್ರವನ್ನು ಅವರು ಸಮರ್ಥವಾಗಿ ಅಭಿನಯಿಸಿದ್ದರು. ಕನ್ನಡ ವೃತ್ತಿ ರಂಗಭೂಮಿಯಲ್ಲಿ ರಾಘವೇಂದ್ರ ರಾಯರು ಗುರ್ತಿಸಲ್ಪಡುವುದು ಅದೇ ಪಾತ್ರದಿಂದ.

ಮೊದಮೊದಲು ಒಂದೇ ನಾಟಕದಲ್ಲಿ ಎರಡೂ ಮೂರು ಪಾತ್ರಗಳನ್ನು ನಿರ್ವಹಿಸುವ ನೈಪುಣ್ಯತೆ ಪಡೆದಿದ್ದ ವಿರಳ ಕಲಾವಿದರಲ್ಲಿ ಒಬ್ಬರೆನ್ನಿಸಿದ್ದ ರಾಯರು ಗುಬ್ಬಿ ಕಂಪನಿ ತಯಾರಿಸಿದ 'ಸದಾರಮೆ' ಚಲನಚಿತ್ರದಲ್ಲೂ ಖಳನಾಯಕನಾಗಿ (ಕಲಹಂಸ) ಮಿಂಚಿದರು. ಗುಬ್ಬಿ ಕಂಪನಿಯ ನಾಟಕ ಹಾಗೂ ಚಲನಚಿತ್ರಗಳಲ್ಲಿ ಕಾಯಂ ಪಾತ್ರಧಾರಿಯಾದರು. 'ಅಕ್ಕ ಮಹಾದೇವಿ' ನಾಟಕದಲ್ಲಿ ಕೌಶಿಕರಾಜನಾಗಿ ಪ್ರೇಕ್ಷಕರ ಪ್ರಶಂಸೆ ಪಡೆದ ಅವರಿಗೆ ಚಿತ್ರ ಜಗತ್ತಿಗೆ ಕಾಲಿಟ್ಟ ಮೇಲೆ ಬೇರೆ ನಿರ್ಮಾಪಕರಿಂದ ಆಹ್ವಾನಗಳು ಬರತೊಡಗಿದವು. ಅವುಗಳಲ್ಲಿ ಬಹುತೇಕ ಪೌರಾಣಿಕ ಚಿತ್ರಗಳಾಗಿದ್ದವು. ಎಲ್ಲ ಪಾತ್ರಗಳಲ್ಲಿ ನೋಡುಗರ ಮೆಚ್ಚುಗೆ ಗಳಿಸಿದ ರಾಯರು ಗುಬ್ಬಿ ಕಂಪನಿಯ 'ಸುಭದ್ರ' ಚಿತ್ರದಲ್ಲಿ ಬಲರಾಮನ ಪಾತ್ರದಲ್ಲಿ ಗಮನ ಸೆಳೆದರು. ಅದೇ ಕಂಪನಿಯ ಚಿತ್ರಗಳಲ್ಲಿ ಕಾಣಿಸಿಕೊಂಡ ಅವರು ಮಹಾತ್ಮ ಸಂಸ್ಥೆಯ 'ಕೃಷ್ಣಲೀಲ'ದಲ್ಲಿ ವಸುದೇವನ ಪಾತ್ರವನ್ನು ಪೋಷಿಸಿದರು. 'ನಾಗಕನ್ನಿಕಾ', 'ಗೋರ ಕುಂಬಾರ', 'ದಳ್ಳಾಳಿ' ಮೊದಲಾದ ಚಿತ್ರಗಳಲ್ಲಿ ಅವರಿಗೆ ಮುಖ್ಯ ಪಾತ್ರಗಳಿದ್ದವು. ಟಿ.ಪಿ. ಕೈಲಾಸಂ, ಆರ್. ನಾಗೇಂದ್ರ ರಾವ್, ಎಂ.ಜಿ. ಮರಿರಾವ್‌ರೊಂದಿಗೆ ಒಡನಾಟದಲ್ಲಿದ್ದು, ರಂಗಭೂಮಿಯಲ್ಲಿ ಸದಾ ಕ್ರಿಯಾಶೀಲರಾಗಿದ್ದರು ರಾಘವೇಂದ್ರ ರಾವ್.

⌘